ದಿನಾಂಕಃ **3.8.2026** ಎಂ.ವಿ.ಸಿ. ನಂಃ **232/2025** ಪಿಡಬ್ಲೂಃ **1**

**ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 3 ನೇ ಎದುರುದಾರರ ಪರವಾಗಿ ಶ್ರೀ ಜೆ ಸಿ ಜಿ ರವರ ಪರವಾಗಿ ಶ್ರೀಮತಿ ವಿ ಎಸ್ ಎಂ ವಕೀಲರಿಂದಃ**

ಪ್ರಮಾಣ ಪತ್ರ ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿಗಳನ್ನು ಕೊಟ್ಟಿದ್ದೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ ಹಾಗೂ ಹಾಲನ್ನೂ ಸಹ ಮಾರಾಟ ಮಾಡುತ್ತಿದ್ದೇನೆ. ದಿಃ 5-3-2025 ರಂದು ಅಪಘಾತಕ್ಕೀಡಾದ ಮೋಟಾರ್ ಸೈಕಲ್ ನನ್ನದೇ ಆಗಿದೆ. ನನಗೆ ಮೋಟಾರ್ ಸೈಕಲ್ ಓಡಿಸಲು ಡಿ ಎಸ್ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ದೂರನ್ನು 7-3-2025 ರಂದು ಕೊಡಲಾಗಿದೆ ಎಂದರೆ ಸರಿ. ಆ ದೂರನ್ನು ನಾನೇ ಸಲ್ಲಿಸಿದ್ದೇನೆ. ದೂರು ಕೊಟ್ಟಿರುವವರು ಕರಿಬಸಪ್ಪ ಎಂದರೆ ಸರಿ. ಅವರು ನನ್ನ ತಮ್ಮ. ಅಪಘಾತವನ್ನು ಅವರು ಖುದ್ದು ನೋಡಿಲ್ಲ. ಅಪಘಾತಕ್ಕೆ ಕಾಲಕ್ಕೆ ನಾನು ತಲೆಗೆ ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸರಿ. ನಾನು ರಸ್ತೆಯ ಮಧ್ಯ ಭಾಗದಲ್ಲಿ ವಾಹನವನ್ನು ಓಡಿಸಿಕೊಂಡು ಹೋಗಿ ರಸ್ತೆಯಲ್ಲಿ ಹೋಗುತ್ತಿದ್ದ ವಾಹನಗಳಿಗೆ ಅಡ್ಡಿ ಪಡಿಸಿದೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಚಾಲನೆ ಮಾಡಿಕೊಂಡು ಬರುತ್ತಿದ್ದ ವಾಹನಕ್ಕೆ ನಾನೇ ಅಡ್ಡಿ ಪಡಿಸಿದ ಕಾರಣ ಅಪಘಾತ ಆಗಿದೆ ಎಂದರೆ ಸರಿಯಲ್ಲ.

ನನಗೆ ಅಪಘಾತದಲ್ಲಿ ಸಾದಾ ಸ್ವರೂಪದ ಗಾಯಗಳು ಆಗಿದ್ದವು ಎಂದರೆ ಸರಿಯಲ್ಲ. ಅಪಘಾತದ ತಕ್ಷಣ ನಾನು ವಿಮ್ಸ್ ಆಸ್ಪತ್ರೆಗೆ ಹೋಗಿದ್ದೆ ಆ ನಂತರ ಖಾಸಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದೆ ಎಂದು ಬರೆಸಿದ್ದೇನೆ ಎಂದರೆ ಸರಿ. ಖಾಸಗಿ ಆಸ್ಪತ್ರೆಗೆ ಹೋಗುವಂತೆ ವಿಮ್ಸ್ ಆಸ್ಪತ್ರೆಯವರು ಪತ್ರ ಕೊಟ್ಟಿಲ್ಲ. ಚಿಕಿತ್ಸೆ ಗೆ 1 ಲಕ್ಷ ಖರ್ಚಾಗಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನಗೆ ವ್ಯವಸಾಯದಿಂದ ಮತ್ತು ಹಾಲು ಮಾರುವುದರಿಂದ ವರ್ಷಕ್ಕೆ 5 ಲಕ್ಷ ವರಮಾನ ಇತ್ತು ಈಗ ಅದು ನಷ್ಟ ಆಗಿದೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಗಾಯಗಳಿಂನದ ನನಗೆ ಯಾವುದೇ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ನಿರ್ಲಕ್ಷ್ಯ ಚಾಲನೆಯಿಎಂದ ಅಗಿದೆ. ಆದ್ದರಿಂದ ಎದುರುದಾರರು ಪರಿಾಹರ ಕೊಡಲು ಬಾಧಸ್ದರಲ್ಲ ಎಂದರೆ ಸರಿಯಲ್ಲ್ಲ. ಪರಿಹಾರಕ್ಕಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.